2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್. ಸಿ ರವರ ನ್ಯಾಯಾಲಯ
ಕನಕಪುರ

ಸಿ.ಸಿ. ನಂಃ 374/2008

ಪಿರ್ಯಾದುದಾರರು ಃ ಕನಕಪುರ ರೂರಲ್ ಪೋಲಿಸ್ ಠಾಣೆ

ವಿರುದ್ಧ

ಆರೋಪಿಗಳು ಃ 1. ಬಸವರಾಜ ಬಿಡದಳ್ಳಿ ಅಲಿಯಸ್ ಶಿವಾನಂದ
ಅಲಿಯಾಸ್ ಶಿವಪ್ಪ ಕನ್ನೇಶ್ವರ ಬಿನ್ ಲೇಟ್
ರುದ್ರಯ್ಯ
42 ವರ್ಷ , ನಂ.309 ,
ರೇಣುಕಾದೇವಿ ನಿಲಯ ,
ಹೌಸಿಂಗ್ ಬೋರ್ಡ ಕಾಲೋನಿ, ಕನಕಪುರ ,
ಸ್ವಂತ ಊರು ಹಸ್ವಿ ಗ್ರಾಮ , ಸುಮನಹಳ್ಳಿ ಅಂಚೆ
,
ಸೊರಬ ತಾಲ್ಲೂಕು , ಶಿವಮೊಗ್ಗ ಜಿಲ್ಲೆ .
(ಚಿಛಿಚಿಣಜಜ)
2. ಅನಿಲ್ ಸುರೇಶಪ್ಪ ಕರಿಗೌಡರ್
ಬಿನ್ ಲೇಟ್ ಸುರೇಶಪ್ಪ , 32 ವರ್ಷ ,
ಡಂಬಳ್‌ಗ್ರಾಮ , ಮುಂಡರಗಿ ತಾಲ್ಲೂಕು ,
ಗದಗ್ ಜಿಲ್ಲೆ .

3. ಟಿ.ಆರ್.ನಾರಾಯಣಗೌಡ ಬಿನ್ ರಾಮೇಗೌಡ ,
50 ವರ್ಷ , 31/ಎ ಶಾಂತಿಮಾರ್ಗ, ಸಿ.ಐ.ಟಿ.ಬಿ.,
ಚೌಲ್ಟ್ರಿ ಹಿಂಬಾಗ , ಸಿದ್ದಾರ್ಥನಗರ , ಮೈಸೂರು .

ಸ್ವಂತ ಊರು ಹೊಸಬೀದಿ , ಟಿ.ನರಸೀಪುರ
ತಾಲ್ಲೂಕು, ಮೈಸೂರು ಜಿಲ್ಲೆ ,

4. ಕೆ.ಎಂ.ರಮೇಶ್ ಬಿನ್ ಲೇಟ್ ಮುದ್ದಯ್ಯ ,
54 ವರ್ಷ , 13 , ಬೈರವೇಶ್ವರ ನಿಲಯ ,
6ನೇ ಮುಖ್ಯ ರಸ್ತೆ , ದೊಡ್ಡಕಲ್ಲಸಂದ್ರ ,
ಬೆಂಗಳೂರು-62 , ಸ್ವಂತ ಊರು ಸಿ.ಎಸ್.ಪುರ
ಗುಬ್ಬಿ ತಾಲ್ಲೂಕು . ತುಮಕೂರು ಜಿಲ್ಲೆ.

6. ಕೆ.ಎಂ.ಜಯದೇವಯ್ಯ ಬಿನ್ ಮಹಂತಪ್ಪ
45 ವರ್ಷ , ಕಾಚೋಹಳ್ಳಿ ಗ್ರಾಮ ,
ಲಕ್ಷ್ಮೀಪುರ ಅಂಚೆ , ದಾಸನಪುರ ಹೋಬಳಿ,
ಬೆಂಗಳೂರು ಉತ್ತರ ತಾಲ್ಲೂಕು .

7. ಬಸವರಾಜ ಬಿನ್ ದೇವೇಂದ್ರಪ್ಪ ನಲೋಡಿ ,
36 ವರ್ಷ , ಮುಳಗುಂದ ನಗರ ,
ಗದಗ ತಾಲ್ಲೂಕು ಮತ್ತು ಜಿಲ್ಲೆ

8. ಕುಮಾರಿ ಅನ್ನಪೂರ್ಣಸಾಲಿಮಠ
ಆ/ಠ ಕೂಡಲಯ್ಯ ಸಾಲಿಮಠ , 30 ವರ್ಷ ,
ನಲವತ್‌ವಾಡ್ ಗ್ರಾಮ , ಮುದ್ದೆಬಿಹಾಳ ತಾಲ್ಲೂಕು,
ಬಿಜಾಪುರ ಜಿಲ್ಲೆ

ದೋಷಾರೋಪಣೆ

ಶ್ರೀಮತಿ ಹೇಮಶ್ರೀ ಡಿ. 2ನೇ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ಕನಕಪುರ, ಆದ ನಾನು ನಿಮ್ಮನ್ನು ಈ ಕೆಳಗಿನಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ಕನಕಪುರ ತಾಲ್ಲೂಕಿನ ಕನಕಪುರ ಗ್ರಾಮಾಂತರ ಪೋಲೀಸ್ ಠಾಣಾ ಸರಹದ್ದು ಈ ನ್ಯಾಯಾಲಯದ ವ್ಯಾಪ್ತಿಗೆ ಕೂತಗಾನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 7 ನೇ ಆರೋಪಿಯಾದ ನೀವು ನಕಲಿ ಶಿಕ್ಷಕನಾಗಿದ್ದು , ಅಸಲಿ ಶಿಕ್ಷಕ ಎಂದು ಸೃಷ್ಟಿಸಿದ ನಕಲೀ ವರ್ಗಾವಣೆಯ ಆದೇಶ ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ , ಬೆಂಗಳೂರು ಗ್ರಾಮಾಂತರ ಜಿಲ್ಲೆ , ಬೆಂಗಳೂರು ಇವರ ಆದೇಶ ಸಂಖ್ಯೆ ಸಿ1/ಪ್ರಾ.ಶಾ.ಶಿ./ವರ್ಗ-ಬಿಡುಗಡೆ01/2003-04ದ ದಿನಾಂಕಃ 13-6-2003 ರ ಜ್ಞಾಪನ ಆದೇಶ ಮತ್ತು ಬಿ. ಇ .ಒ ಕನಕಪುರರವರ ವರ್ಗಾವಣೆ ಸಂಖ್ಯೆಃಎ-2/ವರ್ಗಾವಣೆ/01/2003-04, ದಿಃ 28-11-2003 ರ ಜ್ಞಾಪನ ಆದೇಶದ ಮೇರೆಗೆ ದಿಃ 28-11-2003 ರಂದು ಕರ್ತವ್ಯಕ್ಕೆ ಹಾಜರಾಗಿ ಅಪರಾದ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಆಗಿನ ಕನಕಪುರ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಆರೋಪಿ 3 ರವರು ನೋಟ್‌ಶೀಟ್‌ನಲ್ಲಿ ಉಪ ನಿರ್ದೇಶಕರು , ಸಾರ್ವಜನಿಕ ಶಿಕ್ಷಣ ಇಲಾಖೆ , ಬೆಂಗಳೂರು ಇವರಿಗೆ ಹೊರಡಿಸಿದೆ ಎನ್ನಲಾದ ಆದೇಶ ಸುಳ್ಳು ಹಾಗೂ ಸೃಷ್ಟಿಸಿದ್ದೆಂದು ತಿಳಿದೂ ತಿಳಿದೂ ಆರೋಪಿ 7 ರವರಿಗೆ ಸದರಿ ವರ್ಗಾವಣೆ ಆದೇಶ ನೀಡಲು ಆದೇಶಿಸಿ ಅಪರಾದ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

4ನೇ ಆರೋಪಿ ಆದ ನೀವು ಮತ್ತು 6 ನೇ ಆರೋಪಿ ಕೆ.ಎಂ.ಜಯದೇವಯ್ಯ ಶಾಖಾಧೀಕ್ಷ ಇವರುಗಳು ಸದರಿ ಉಪನಿರ್ದೇಶಕರ ಆದೇಶವು ಸುಳ್ಳೆಂದು ಗೊತ್ತಿದ್ದರು ಸಹ 7ನೇ ಆರೋಪಿಯವರನ್ನು ಕರ್ತವ್ಯಕ್ಕೆ ತೆಗೆದುಕೊಳ್ಳಲು ಅನುಮತಿಗಾಗಿ ಕೋರಿ

ನೋಟ್‌ಶೀಟ್‌ನಲ್ಲಿ ಬರೆದು 3ನೇ ಆರೋಪಿ ರವರ ಜೊತೆ ಸೇರಿ ವರ್ಗಾವಣೆ ಆದೇಶಕ್ಕೆ 3 ನೇ ಆರೋಪಿಯ ಪರವಾಗಿ 4ನೇ ಆರೋಪಿರವರು ಸಹಿ ಮಾಡಿ ಅಪರಾದ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

5ನೇ ಆರೋಪಿಯದಾ ವಿಶ್ವನಾಥ್ ಆದ ನೀವು ಬಿ.ಇ .ಓ ಕಚೇರಿಯಲ್ಲಿ ಪ್ರ.ದ.ಸ ಆಗಿ ಕೆಲಸ ಮಾಡುತ್ತಿದ್ದು ಸದರಿ ಆದೇಶಗಳನ್ನು 4ನೇ ಆರೋಪಿರವರು 7ನೇ ಆರೋಪಿಯವರಿಗೆ ಕರ್ತವ್ಯಕ್ಕೆ ಹಾಜರಾಗಲು ಕೊಟ್ಟಿದ್ದು 7 ನೇ ಆರೋಪಿಯವರು ಸದರಿ ಆದೇಶಗಳು ಸೃಷ್ಟಿಸಿದ್ದು ಹಾಗೂ ನಕಲಿ ಆದೇಶವೆಂದು ತಿಳಿದೂ ತಿಳಿದೂ ಕೂತಗಾನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ದಿಃ28-11-2004 ರಂದು ಹೋಗಿ ಕರ್ತವ್ಯಕ್ಕೆ ಹಾಜರಾಗಿ ದಿಃ 27-7-2004 ರವರೆಗೆ ಕರ್ತವ್ಯ ನಿರ್ವಹಿಸಿ ಶಿಕ್ಷಣ ಇಲಾಖೆಯಿಂದ ರೂ 43,414/- ಹಣವನ್ನು ವೇತನವಾಗಿ ಪಡೆದು ದಿಃ 28-7-2004 ರಿಂದ ಕರ್ತವ್ಯಕ್ಕೆ ಗೈರು ಹಾಜರಾಗಿ ಮತ್ತು 8ನೇ ಆರೋಪಿಯವರು 7 ನೇ ಆರೋಪಿ ರವರಿಗೆ ಸಂಬಂಧಿಸಿದ ನಕಲಿ ಎಲ್‌ಪಿಸಿ ಎಂದು ಗೊತ್ತಿದ್ದರು ಕೂಡ 1ನೇ ಆರೋಪಿಯೊಂದಿಗೆ ಶಾಮಿಲಾಗಿ ಬರೆದು ಅಪರಾದ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ 1 ರಿಂದ 8 ನೇ ಆರೋಪಿಗಳಾದ ನೀವು ಸಮಾನ ಉದ್ದೇಶ ಹೊಂದಿ ಒಬ್ಬರಿಗೊಬ್ಬರು ಕೃತ್ಯದಲ್ಲಿ ಸಹಕಾರಿಯಾಗಿದ್ದು , ಒಳಸಂಚು ನಡೆಸಿ , ಸುಳ್ಳು ದಾಖಲೆಗಳನ್ನು ಸೃಷ್ಟಿಸಿ , ಸದರಿ ಸುಳ್ಳು ದಾಖಲೆಗಳನ್ನು ನಿಜ ದಾಖಲೆಗಳೆಂದು ಸೃಷ್ಟಿಸಿ ಸರ್ಕಾರಿದಿಂದ 7 ನೇ ಆರೋಪಿಯವರು 43,414/- ಹಣವನ್ನು ವೇತನವಾಗಿ ಪಡೆಯಲು ಸಹಕರಿಸಿ ಸರ್ಕಾರಕ್ಕೆ ಮೋಸ ಮಾಡಿ ಭಾ.ದಂ.ಸಂಹಿತೆ ಕಲಂ. 120 (ಬಿ) ,465, 468,

471 , 420 ಜೊತೆಗೆ 34 ಐಪಿಸಿ ರಂತೆ ಅಪರಾದ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

(ಹೇಮಶ್ರೀ ಡಿ.)
2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಕನಕಪುರ .

ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ರಡಿಯಲ್ಲಿ ಆರೋಪಿಯ ಹೇಳಿಕೆಗಳುಃ

1) ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉ. 1.

2.

3.

4.

6.

7.

8.

2) ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ಸಾಕ್ಷ್ಯ ಮಾಡುವುದಕ್ಕೆ ಬಯಸುತ್ತೀರಾ?

ಉ. 1.

2.

3.

4.

6.

7.

8.

ಮೇಲಿನ ಹೇಳಿಕೆಯನ್ನು ಆಪಾದಿತನಿಗೆ ಓದಿ ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸುತ್ತೇನೆ.

ಓ.ಹೇ.ಕೇ.ಸ.ಇ

**(ಹೇಮಶ್ರೀ ಡಿ.)**
2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಕನಕಪುರ .